(ಇಂದು ದಿನಾಂಕ 10-06-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದ–**

ಬರ್ಗಿಯಲ್ಲಿ ಪ್ರತಿಭಟನೆ ಮಾಡಿ ರಸ್ತೆ ತಡೆ ಮಾಡಿದ ವಿಚಾರದಲ್ಲಿ ನನ್ನ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಬರ್ಗಿ ಗ್ರಾಮದ ಸ.ನಂ. 82/4 ಪ್ರತಿವಾದಿಗಳಿಗೆ ಸೇರಿದಂತಹ ಸ್ವತ್ತು ಎಂದರೆ ಸರಿ. ಸ.ನಂ. 82/4 ರಲ್ಲಿ ಪ್ರತಿವಾದಿಗಳು ಕಬಜಾ ವಹಿವಾಟಿನಲ್ಲಿದ್ದು, ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸ.ನಂ. 82/4 ರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

ವಾದಪತ್ರದ 6 ನೇ ಕಂಡಿಕೆಯಲ್ಲಿ ಸ.ನಂ. 86/6 ಮತ್ತು 82/4 ರ ಪೂರ್ವ ದಿಕ್ಕಿನಲ್ಲಿ 8 ಪೂಟ್ ಅಗಲದ ರಸ್ತೆ ಇದ್ದಿದ್ದಾಗಿ ಉಲ್ಲೇಖಿಸಿದ್ದು, ಸದರಿ ರಸ್ತೆಯಲ್ಲಿ ಓಡಾಡುವ ಬಗ್ಗೆ ತಕರಾರು ವ್ಯಕ್ತಪಡಿಸಿದ್ದಿರಾ ಎಂದರೆ ಸಾಕ್ಷಿಯು ಮೊದಲಿಗೆ ಯಾವುದೇ ರಸ್ತೆ ಇರುವುದಿಲ್ಲ ಎಂದು ನುಡಿದಿದ್ದು, ನಂತರ ತಕರಾರನ್ನು ಮಾಡಿದ್ದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಸ್ವಾಧೀನಕ್ಕೆ ಸಂಬಂಧಪಟ್ಟತೆ ಪ್ರತಿವಾದಿಗಳು ನನಗೆ ಯಾವುದೇ ರೀತಿಯಾದ ತೊಂದರೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು

ಸಾಗುವಳಿಗೆ ತೊಂದರೆ ನೀಡಿರುವುದಿಲ್ಲ, ಆದರೆ ಗಡಿ ವಿಚಾರದಲ್ಲಿ ತೊಂದರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆಚಾರಿಕೊಪ್ಪಕ್ಕೆ ಹೋಗುವ ರಸ್ತೆಯನ್ನು ಸೂಕ್ತ ರೀತಿಯಲ್ಲಿ ಅಳತೆ ಮಾಡಿದಲ್ಲಿ ನನ್ನ ಸ್ವಾಧೀನದಲ್ಲಿ ಇರುವಂತಹ ಸ್ವತ್ತಿನ ಕೆಲವು ಭಾಗ ಪ್ರತಿವಾದಿಗಳಿಗೆ ಸೇರಿರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ದಾವಾ ಸ.ನಂ. 86/6 ಮತ್ತು 82/4 ರ ನಡುವೆ ಇರುವಂತಹ ಪಾಗಾರವನ್ನು ಪ್ರತಿವಾದಿಗಳು ಒಡೆದು ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಜಮೀನಿಗೆ ಪ್ರತ್ಯೇಕ ಪಾಗಾರ ಹಾಗೂ ನನ್ನ ಜಮೀನಿಗೆ ಪ್ರತ್ಯೇಕ ಪಾಗಾರ ಇರುತ್ತದೆ ಎಂದು ನುಡಿಯುತ್ತಾರೆ.

ನನ್ನ ಜಮೀನಾದ ಸ.ನಂ. 86/6 ರಲ್ಲಿನ ಪಾಗಾರ 'L' ಆಕಾರದಲ್ಲಿ ಇದ್ದು, ಸಾಮಾನ್ಯವಾಗಿ ಪಾಗಾರಗಳು ಇರುವ ಎತ್ತರದಷ್ಟು ಎತ್ತರ ಇರುತ್ತದೆ. ಪ್ರತಿವಾದಿಗಳ ಜಮೀನಿನ ಪಾಗಾರ ಎಷ್ಟು ಎತ್ತರ ಇದೆ ಎಂದು ನನಗೆ ಗೊತ್ತಿಲ್ಲ. ಸ.ನಂ. 82/4 ರಲ್ಲಿ ಪ್ರತಿವಾದಿಗಳು ಸಾಗುವಳಿ ಮಾಡಲು ನನ್ನ ತಕರಾರು ಇದೆಯಾ ಎಂದರೆ ಸರ್ವೆ ಮಾಡಲು ನೋಟಿಸ್ ಮಾಡಿದಲ್ಲಿ ನನ್ನ ತಕರಾರು ಇದೆ, ಆದರೆ ಸಾಗುವಳಿಗೆ ಯಾವುದೇ ರೀತಿಯಾದ ತಕರಾರು ಇರುವುದಿಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಪ್ರಸ್ತುತ ಸುಳ್ಳು ಸಂಗತಿಗಳಿಂದ ಕೂಡಿದ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸ್ವತ್ತಿನ ಸರ್ವೆ ಮಾಡಿಸಿದಲ್ಲಿ ನಾನು ಪ್ರತಿವಾದಿಗಳ ಜಮೀನನ್ನು ಒತ್ತುವರಿ ಮಾಡಿದ ಬಗ್ಗೆ ತಿಳಿದು ಬರುತ್ತದೆ ಎಂಬ ಉದ್ದೇಶದಿಂದ ಪ್ರಸ್ತುತ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಆಚಾರಿಕೊಪ್ಪಕ್ಕೆ ಹೋಗುವ ರಸ್ತೆ ಪ್ರತಿವಾದಿಗಳ ಜಮೀನಿಗೆ ಒಳಪಟ್ಟಿದ್ದು, ಸದರಿ ಸ್ವತ್ತನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಪ್ರಸ್ತುತ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ